ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಭಟ್ಕಳ ತಾಲ್ಲೂಕು ಆಸ್ಪತ್ರೆಯಲ್ಲಿ 7 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 6 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಂ.ಎಸ್.(ಜಿ.ಎಸ್) ಹುದ್ದೆ ಮಾತ್ರ ಖಾಲಿ ಇರುತ್ತದೆ. ಈ ಖಾಲಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲಾಗಲಿ ಅಥವಾ ಖಾಸಗಿ ತಜ್ಞರನ್ನು ನೇಮಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಆ) ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ತಡಮಾಡದೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಇ) ನಿಜ.

ಈ) ಸದರಿ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ ಡಿ ನೌಕರರುಗಳಿಂದಲೇ ವಿಳಂಬವಾಗದಂತೆ ಸೇವೆ ಸಲ್ಲಿಸಲಾಗುತ್ತಿದೆ.

ಉ) ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಅಥವಾ ಖಾಸಗಿ ತಜ್ಞರನ್ನು ಸಂದರ್ಶಕ ತಜ್ಞರಾಗಿ ನೇಮಿಸಿಕೊಳ್ಳಲು, ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಗ್ರೂಪ್ ಡಿ ಹುದ್ದೆಗಳನ್ನು ನಾನ್ ಕ್ಲಿನಿಕ್ ಮುಖಾಂತರ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಂಡಿದೆ.

347(4604); ಶ್ರೀ ರಾಮರೆಡ್ಡಿ ಟಿ.ವಿ.(ಬಾಗೇಪಲ್ಲಿ); ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅಗತ್ಯವಿರುವ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಅಗತ್ಯವಿರುವಷ್ಟು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆಯೇ;

ಇ) ಇಲ್ಲದಿದ್ದಲ್ಲಿ, ಕೊರತೆಯಿರುವ ಶಿಕ್ಷಕರುಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ 1,85,800 ಆಗಿರುತ್ತದೆ.

ಆ) ಹೌದು.

ಇ) 2005–06ನೇ ಸಾಲಿನಲ್ಲಿ ಬಡ್ತಿಯಿಂದ, ನಿವೃತ್ತಿಯಿಂದ ಖಾಲಿಯಾದ ಹುದ್ದೆಗಳು ಹಾಗೂ ಎಸ್.ಎಸ್.ಎ. ಯಿಂದ ಹೊಸದಾಗಿ ಮಂಜೂರಾದ ಹುದ್ದೆಗಳು ಸೇರಿದಂತೆ ಒಟ್ಟು 10,555 ಖಾಲಿ ಇರುವ

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ ಬಗ್ಗೆ ಪರಿಶೀಲಿಸುತ್ತಿದ್ದು ಶೀಘ್ರವೇ ಭರ್ತಿ ಮಾಡಲಾಗುವುದು.

348(4069); ಶ್ರೀ ಕಿರಣ್ ಕುಮಾರ್ ಕೆ.ಎಸ್.(ಕಳ್ಳಂಬೆಳ್ಳ); ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯೂರು ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ರೋಗಿಗಳ ತಪಾಸಣಾ ಸಾಮರ್ಥ್ಯ ಎಷ್ಟು;

ಆ) ಈ ಆಸ್ಪತ್ರೆಯ್ಲಲಿರುವ ವೈದ್ಯರ, ತಜ್ಞರ ಹಾಗೂ ವೈದ್ಯೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಹುದ್ದೆಗಳೆಷ್ಟು; ಇವುಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಆಸ್ಪತ್ರೆಯನ್ನು (ಆರೋಗ್ಯ ಕೇಂದ್ರವನ್ನು) ಮೇಲ್ದರ್ಜೆಗೇರಿಸುವ (ಉನ್ನತೀಕರಿಸುವ) 30 ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಯೋಜನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಕಾರ್ಯಾನುಷ್ಠಾನಗೊಳಿಸಲಾಗುವುದು ವಿವರ ನೀಡುವುದು?

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಹುಳಿಯೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಜೊತೆಯಲ್ಲಿ ಪ್ರಸೂತಿ ಗೃಹವು ಸಹ ಕಾರ್ಯನಿರ್ವಹಿಸುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 6 ಹಾಸಿಗೆ ಹಾಗೂ ಪ್ರಸೂತಿ ಗೃಹದಲ್ಲಿ 10 ಹಾಸಿಗೆಗಳು ಒಟ್ಟು 16 ಹಾಸಿಗೆಗಳ ಸಾಮರ್ಥ್ಯ ಇದೆ.

ಆ) ಈ ಆಸ್ಪತ್ರೆಯಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು 2, ಅರೆ ವೈದ್ಯಕೀಯ ತಜ್ಞ ಹುದ್ದೆಗಳಾದ ಫಾರ್ಮಸಿಸ್ಟ್–2, ನೇತ್ರ ಸಹಾಯಕರು–1, ಕ್ಷ–ಕಿರಣ ಕಜ್ಞ–1, ಕಿರಿಯ ಪ್ರಯೋಗಶಾಲಾ ತಜ್ಞ–1, ಒಟ್ಟು 5 ಹುದ್ದೆಗಳು ಹಾಗೂ ಇತರ ವೈದ್ಯೇತರ ಸಿಬ್ಬಂದಿಗಳು 13. ಹೀಗೆ ಒಟ್ಟು 20 ಹುದ್ದೆಗಳು ಮಂಜೂರಾಗಿವೆ.

ಇ) ಖಾಲಿ ಇರುವ ಹುದ್ದೆಗಳು–3, (ಹಿರಿಯ ಮಹಿಳಾ ಆರೋಗ್ಯ ಸಹಾಯಕಿ–1, ಹಿರಿಯ ಪುರುಷ ಆರೋಗ್ಯ ಸಹಾಯಕ–1, ಕ್ಷ–ಕಿರಣ ತಜ್ಞ–1) ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಮತ್ತು ಹಿರಿಯ ಪುರುಷ ಆರೋಗ್ಯ ಸಹಾಯಕ ಹುದ್ದೆಗಳನ್ನು ಪದೋನ್ನತ್ತಿ ಮೂಲಕ ಭರ್ತಿಮಾಡಲು ಕ್ರಮ